ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

30ನೇ ಅಕ್ಟೋಬರ್ 2013

**ಮಾನ್ಯಶ್ರೀ ಸಿದ್ದರಾಮಯ್ಯ ರವರೇ,**

**ವಿಷಯ:-** ಉತ್ತಮ ಆಡಳಿತದ ನಿಮ್ಮ ವಾಗ್ದಾನವನ್ನು ಉಳಿಸಿಕೊಳ್ಳಲು ನಿವಾಸಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಬಗ್ಗೆ.

ಪ್ರಸ್ತಾವಿತ ಫೋರಮ್ ಜಂಕ್ಷನ್ ನಿಂದ ಹೊಸೂರು ರಸ್ತೆಯ ಸರ್ಜಾಪುರ ಜಂಕ್ಷನ್ ವರೆಗಿನ ಕೆಳರಸ್ತೆ (ಅಂಡರ್ ಪಾಸ್) ಯೋಜನೆಯ ಬಗ್ಗೆ ವ್ಯಾಕುಲಗೊಂಡು ಅನೇಕ ನಿವಾಸಿ ಅಭಿವೃದ್ಧಿ ಸಂಘ-ಸಂಸ್ಥೆಗಳು ತಮ್ಮ ಕಳವಳವನ್ನು ವ್ಯಕ್ತಪಡಿಸಿ ನನಗೆ ಮನವಿಗಳನ್ನು ಸಲ್ಲಿಸಿವೆ. ಯೋಜನೆಯ ವಿನ್ಯಾಸದಲ್ಲಿಯೇ ಗಂಭೀರ ಕೊರತೆಗಳು ಮತ್ತು ಬಹಳ ಮುಖ್ಯವಾಗಿ ಸ್ಥಳೀಯ ನಿವಾಸಿಗಳ ಮತ್ತು ವ್ಯಾಪಾರೋದ್ಯಮಗಳ ನಿರೀಕ್ಷೆಗಳನ್ನು ಗಮನಿಸುವಲ್ಲಿಯೇ ಈ ಯೋಜನೆ ವಿಫಲವಾಗಿರುವುದು ನನ್ನ ಗಮನಕ್ಕೆ ಬಂದಿದೆ. ಪ್ರಸ್ತಾವಿತ ಅಂಡರ್ ಪಾಸ್ ವಿನ್ಯಾಸವು ದೋಷಯುಕ್ತವಾಗಿದ್ದು ನಕ್ಷೆಯ ಅಸಮರ್ಪಕತೆ, ಕೋರಮಂಗಲದ ಸುತ್ತಮುತ್ತಲಿನ ಸಂಚಾರಿ ವಾಹನಗಳ ದಟ್ಟಣೆಗಳ ಅವಗಣನೆ, ಸ್ಥಳೀಯ ಸಂಚಾರಕ್ಕೆ ಸೂಕ್ತ ಅವಕಾಶವನ್ನು ಕಲ್ಪಿಸದಿರುವುದರ ಜೊತೆಗೆ ಪ್ರಮುಖ ವಾಣಿಜ್ಯ ವಲಯಗಳ ಸ್ಥಳದಲ್ಲಿ ಮತ್ತು ಪ್ರವೇಶ ಮಾರ್ಗಗಳಲ್ಲಿ ಸಾಕಷ್ಟು ಸ್ಥಳಾವಕಾಶವನ್ನು ನಿರೂಪಿಸದಿರುವುದರಿಂದ ಅಲ್ಲಿನ ನೆರೆಹೊರೆಗಳನ್ನು ಭಂಗಗೊಳಿಸುವಂತಿದೆಯೆಂದು ನಿವಾಸಿಗಳು ನನ್ನ ಗಮನಕ್ಕೆ ತಂದಿದ್ದಾರೆ. ಹಾಗೆಯೇ ಪಾದಾಚಾರಿ ಮಾರ್ಗಗಳನ್ನಾಗಲಿ ಬಸ್ ನಿಲ್ದಾಣವನ್ನಾಗಲಿ ವಿನ್ಯಾಸವು ಕಲ್ಪಿಸಿಲ್ಲ.

ಸರ್ಜಾಪುರ ರಸ್ತೆಯ ಅಂಡರ್ ಪಾಸ್ ನಿರ್ಮಾಣ ಯೋಜನೆಯ ವಿವಾದದ ಹಿನ್ನಲೆಯಲ್ಲಿ ಶ್ರೀ ಕೌಶಿಕ್ ಮುಖರ್ಜಿ, ಭಾ.ಆ.ಸೇ. ರವರ ವರದಿಯ ಕೆಲ ಅಂಶಗಳನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ವರದಿಯು ಹೇಳುವಂತೆ, ಯಾವುದೇ ಅಭಿವೃದ್ಧಿ ಯೋಜನೆಯನ್ನು ರೂಪಿಸುವಾಗ ಎಲ್ಲಾ ಬಾಧ್ಯಸ್ಥರನ್ನೊಳಗೊಂಡ ಸಾರ್ವಜನಿಕ ಸಮಾಲೋಚನೆಗಳು ಅತ್ಯಂತ ಪ್ರಾಮುಖವಾಗಿವೆ ಮತ್ತು ಫೋರಮ್ ಮಾಲ್ ಬಳಿಯ ಒಂದು ಸಮಗ್ರ ಅಂಡರ್ ಪಾಸ್ ರಸ್ತೆಗಾಗಿ, ಮಡಿವಾಳ ಕೆಳರಸ್ತೆಯನ್ನು ಇನ್ನೂ ಆಳವಾಗಿ ನಿರ್ಮಿಸಿ ಅದಕ್ಕೆ ಸಂಪರ್ಕ ಕಲ್ಪಿಸುವುದರ ಜೊತೆಗೆ ಅಕ್ಕಪಕ್ಕದ ಕೂಡು ರಸ್ತೆಗಳನ್ನು ಅಗಲೀಕರಿಸಬೇಕೆಂದೂ ಕಮಿಟಿಯ ವರದಿಯು ಹೇಳಿದೆ. ಕಮಿಟಿಯ ಯಾವ ಸಲಹೆಗಳನ್ನು ಹೈಕೋರ್ಟ್ ಕಡ್ಡಾಯವಾಗಿ

...2..

11ನೇ ಮಹಡಿ, ದೊಡ್ಡ ಗೋಪುರ, ಸರ್.ಎಂ.ವಿಶ್ವೇಶ್ವರಯ್ಯ ಕೇಂದ್ರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು - 560 001
ದೂರವಾಣಿ 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680
ಅಂತರ್ಜಾಲ ವಿಳಾಸ : rajeev.c@nic.in
www.rajeev.in / ham:VU2RCL

ಪರಿಗಣಿಸಬೇಕೆಂದು ಹೇಳಿತ್ತೊ ಮತ್ತು ಯಾವುದನ್ನು ಸರ್ಕಾರವೂ ಅಂಗೀಕರಿಸಿತ್ತೋ ಅದ್ಯಾವುದನ್ನೂ ಈಗಿನ ಪ್ರಸ್ತಾವಿತ ಯೋಜನೆಯಲ್ಲಿ ಪಾಲಿಸಲಾಗಿಲ್ಲ.

ತಮ್ಮ ಸುತ್ತಮುತ್ತಲಿನ ಪ್ರದೇಶಗಳ ಅಭಿವೃದ್ಧಿ ವಿಷಯದಲ್ಲಿ ಮತ್ತು ತಮ್ಮ ನೆರೆಹೊರೆಗಳಿಗೆ ಸಂಬಂಧಿಸಿದ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ತಮ್ಮನ್ನು ಹೊರಗಿಟ್ಟಿರುವ ಬೆಳವಣಿಗೆಗಳಿಂದ ಸ್ಥಳೀಯ ನಿವಾಸಿಗಳು ಮತ್ತು ಅಭಿವೃದ್ಧಿ ಸಂಘಟನೆಗಳು ರೋಸಿಹೋಗಿದ್ದಾರೆ. ಉತ್ತಮ ಆಡಳಿತದ ಭರವಸೆಗಳಿಂದ ಚುನಾಯಿತಗೊಂಡ ಸರ್ಕಾರಕ್ಕೆ, ನೆರೆಹೊರೆಗಳ ಪರಿಸರದ ವಿಸ್ತಾರ ಮತ್ತು ಬೆಳವಣಿಗೆಗಳಿಗೆ ಸಂಬಂಧಿಸಿದಂತೆ ಪ್ರಮುಖ ನಿರ್ಧಾರಗಳಲ್ಲಿ ಸ್ಥಳೀಯ ನಾಗರಿಕರ ಪಾಲುದಾರಿಕೆಯು ಅತ್ಯಂತ ಮುಖ್ಯವೆಂದು ಕಾಣದಿರುವುದು ಖೇದಕರ. ಹೀಗೆ ಸ್ಥಳೀಯ ನಿವಾಸಿಗಳನ್ನು ಸಂಪರ್ಕಿಸದೆ, ಅವರ ಅಭಿಪ್ರಾಯಗಳನ್ನು ಕೇಳದೆ ಯೋಜನೆಗಳನ್ನು ನಿರೂಪಿಸುವ ಆಡಳಿತ ಮಾದರಿಯು, ಉತ್ತಮ ಆಡಳಿತದ ವಾಗ್ದಾನದೊಂದಿಗೆ ಚುನಾಯಿತವಾದ ಸರ್ಕಾರದ ಧ್ಯೇಯೋದ್ದೇಶಗಳಿಗೆ ಕಿಂಚಿತ್ತೂ ಹೊಂದುವುದಿಲ್ಲವೆಂಬುದನ್ನು ತಾವು ಕೂಡ ಖಂಡಿತ ಒಪ್ಪುವಿರೆಂದು ನಾನು ಭಾವಿಸುತ್ತೇನೆ. ಇಂತಹ ಯೋಜನೆಗಳು, ತಮ್ಮ ಸರ್ಕಾರದ ಮೇಲಿನ ವಿಶ್ವಾಸ ಮತ್ತು ನಂಬಿಕೆಗಳನ್ನು ಹೆಚ್ಚಿಸುವ ಬದಲಿಗೆ ಪಟ್ಟಭದ್ರ ಹಿತಾಸಕ್ತಿಗಳ ಪ್ರಭಾವವನ್ನು ಮತ್ತು ಸರ್ಕಾರದ ಧೋರಣೆಯನ್ನೆ ನಾಗರಿಕರು ಪ್ರಶ್ನಿಸುವಂತೆ ಮಾಡುತ್ತಿರುವುದರ ಕುರಿತು ತಮ್ಮನ್ನು ಎಚ್ಚರಿಸುತ್ತಿದ್ದೇನೆ. ಇಂತಹ ಕಾರಣಗಳಿಂದಲೇ ಜನರು ಮಧ್ಯಪ್ರವೇಶಿಸಲು ನ್ಯಾಯಾಂಗದ ಮೊರೆಹೋಗುತ್ತಾರೆಂಬುದನ್ನು ತಾವು ಮನಗಾಣಬೇಕು.

ನಾನು ಅನೇಕ ಬಾರಿ ಹೇಳಿರುವಂತೆ, ಈ ಅಂಡರ್ ಪಾಸ್ ಯೋಜನೆಯೂ ಸೇರಿದಂತೆ ಬೆಂಗಳೂರಿನ ಅಸಂಖ್ಯಾತ ಸಮಸ್ಯೆಗಳಿಗೆ ರೂಪಿತಗೊಳ್ಳುವ ಪರಿಹಾರಗಳು ಅವಶ್ಯಕವಾಗಿ ಸಮಗ್ರ ಯೋಜಿತ ವಿಧಾನವನ್ನೆ ಪಾಲಿಸಬೇಕು ಮತ್ತು ನೆರೆಹೊರೆ ಪ್ರದೇಶಗಳ ಅಭಿವೃದ್ಧಿ ಹಾಗು ಬದಲಾವಣೆಗಳಲ್ಲಿ ಸ್ಥಳೀಯ ನಿವಾಸಿಗಳ ಆಶೋತ್ತರಗಳನ್ನು ಗಣನೆಗೆ ತೆಗೆದುಕೊಳ್ಳಲೇಬೇಕು.

सत्यमेव जयते



ತಾವು ಈ ಕೂಡಲೇ ಯೋಜನೆಯ ಟೆಂಡರ್ ಪ್ರಕ್ರಿಯೆಯನ್ನು ನಿಲ್ಲಿಸಲು ಮತ್ತು ನಿವಾಸಿ ಅಭಿವೃದ್ಧಿ ಸಂಘಟನೆಗಳು ಮತ್ತು ಇತರ ಬಾಧ್ಯಸ್ಥರೊಡನೆ ಮೊದಲು ಸಮಾಲೋಚಿಸಿ ನಂತರ ಯೋಜನೆಯ ನಕ್ಷೆಯನ್ನು ಅಂತಿಮಗೊಳಿಸಲು ಬೃಹತ್ ಬೆಂಗಳೂರು ಮಹಾನಗರಪಾಲಿಕೆಗೆ ಆದೇಶಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತಿದ್ದೇನೆ. ಇಂತಹ ಕ್ರಮಗಳಿಂದ ಮಾತ್ರವೆ ತಮ್ಮ ಸರ್ಕಾರದ ಬಗ್ಗೆ ನಾಗರಿಕರಲ್ಲಿ ವಿಶ್ವಾಸ ಮೂಡುವುದು ಸಾಧ್ಯ ಮತ್ತು ಅದರ ಎಲ್ಲ ಅಭಿವೃದ್ಧಿ ಕೆಲಸಗಳಿಗೆ ಬೆಂಬಲ ಪ್ರಾಪ್ತವಾಗಬಲ್ಲದು.

ಈ ಕುರಿತು ತಾವು ಮಧ್ಯಪ್ರವೇಶಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಿರೆಂದು ನಿರೀಕ್ಷಿಸುತ್ತಿದ್ದೇನೆ.

ತಮ್ಮ ವಿಶ್ವಾಸಿ

**ರಾಜೀವ್ ಚಂದ್ರಶೇಖರ್**

**ಶ್ರೀ ಸಿದ್ದರಾಮಯ್ಯರವರು**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ವಿಧಾನಸೌಧ, ಬೆಂಗಳೂರು

**ಪ್ರತಿಯನ್ನು:** ಶ್ರೀ ರಾಮಲಿಂಗಾರೆಡ್ಡಿ, ಮಾನ್ಯ ಸಾರಿಗೆ ಸಚಿವರು ಮತ್ತು ಬೆಂಗಳೂರು ನಗರ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು